# ಏಕಲವ್ಯನ ಗುರುಭಕ್ತಿ

'ಜ್ಯೋತಿಷ್ಮತಿ'

ಮಹಾಭಾರತದಲ್ಲಿ ಬರುವ ಏಕಲವ್ಯನ ಕಥೆ ಗುರುಭಕ್ತಿಗೆ ಅನನ್ಯ ಉದಾಹರಣೆ. ಒಬ್ಬ ಗುರು ಪ್ರತ್ಯಕ್ಷವಾಗಿ ಹೇಳಿಕೊಟ್ಟಲ್ಲದೆ ಬಿಲ್ವಿದ್ಯೆಯನ್ನು ಕಲಿಯುವುದು ಅಸಾಧ್ಯವಾದ ಮಾತು. ಹೀಗಿದ್ದೂ, ಏಕಲವ್ಯನು ದ್ರೋಣಾಚಾರ್ಯರನ್ನು ಮನಸ್ಸಿನಲ್ಲೇ ಗುರುವೆಂದು ಸ್ವೀಕಾರ ಮಾಡಿ, ಅವರ ಮಣ್ಣಿನ ವಿಗ್ರಹದ ಮುಂದೆ ನಿಂತು, ತನಗೆ ತಾನೇ ಬಿಲ್ವಿದ್ಯೆಯನ್ನು ಕಲಿತು ಅಪ್ರತಿಮ ಬಿಲ್ಲುಗಾರನಾದ.

ದ್ರೋಣಾಚಾರ್ಯರು ಅಸಾಧಾರಣ ಗುರುವಾಗಿದ್ದರು. ಅವರ ತೀಕ್ಷ್ಣಮತಿ, ಅಪಾರ ಅನುಭವವನ್ನು ಕಂಡು ಭೀಷ್ಮರು ಅವರನ್ನು ಕೌರವ ಹಾಗೂ ಪಾಂಡವ ಕುಮಾರರ ಶಸ್ತ್ರಾಸ್ತ್ರ ವಿದ್ಯಾಭ್ಯಾಸಕ್ಕಾಗಿ ನೇಮಿಸಿದ್ದರು. ಎಲ್ಲರ ಜೊತೆಗೆ ಅಭ್ಯಾಸ ಮಾಡುತ್ತಿದ್ದ ಅರ್ಜುನನು ಎಲ್ಲರಿಗಿಂತ ಬಿಲ್ವಿದ್ಯೆಯಲ್ಲಿ ಪ್ರವೀಣನಾದ. ಅವನು ತನ್ನ ಗುರುಭಕ್ತಿ, ಗುರುಸೇವೆ ಇವುಗಳಿಂದ ದ್ರೋಣಾಚಾರ್ಯರ ಪ್ರೀತಿಗೆ ಪಾತ್ರನಾದ. ಅರ್ಜುನನಿಗೆ ಅವರು ಅನೇಕ ರೀತಿಯ ವಿಶೇಷ ತರಬೇತಿ ನೀಡಿ, ಅವನನ್ನು ಅಪ್ರತಿಮ ಯೋಧನನ್ನಾಗಿಸಿದರು. ಅದರೊಂದಿಗೆ, ಅವರು ಅರ್ಜುನನಿಗೆ, ''ಬಿಲ್ವಿದ್ಯೆಯಲ್ಲಿ ಬೇರೆ ಯಾರೂ ನಿನಗೆ ಸರಿಸಾಟಿಯಾಗದಂತೆ ನಾನು ನೋಡಿಕೊಳ್ಳುತ್ತೇನೆ'' ಎಂದು ಅಕ್ಕರೆಯಿಂದ ಮಾತು ಕೊಟ್ಟರು. ಕ್ರಮೇಣ ಗುರುಗಳ ಕೀರ್ತಿ ಎಲ್ಲೆಡೆ ಹಬ್ಬಿತು. ಅವರ ಬಳಿ ವಿದ್ಯೆ ಕಲಿಯಲು ಸಾವಿರಾರು ಜನ ಬೇರೆ ಬೇರೆ ಊರುಗಳಿಂದ ಬರಲಾರಂಭಿಸಿದರು.

ವ್ಯಾಧರ ರಾಜನಾದ ಹಿರಣ್ಯಧನುಷನ ಮಗನಾದ ಏಕಲವ್ಯನೂ ದ್ರೋಣಾಚಾರ್ಯರ ಬಳಿ ಬಿಲ್ವಿದ್ಯೆಯನ್ನು ಕಲಿಯಲು ಬಂದ. ಆದರೆ ಅವನು ವ್ಯಾಧರ ಜನಾಂಗಕ್ಕೆ ಸೇರಿದವನೆಂಬ ಕಾರಣದಿಂದಲೂ, ಹಾಗೂ ತಾನು ಈಗ ಕಲಿಸುತ್ತಿರುವ ಶಿಷ್ಯಂದಿರ ಸಂಖ್ಯೆಯೇ ಅಧಿಕವಾಗಿದೆ, ಎಲ್ಲರಿಗೂ ಗಮನ ಕೊಡುವುದು ಕಷ್ಟ ಎಂಬ ಕಾರಣದಿಂದಲೂ ಅವರು ಅವನನ್ನು ಶಿಷ್ಯನನ್ನಾಗಿ ಸ್ವೀಕರಿಸಲಿಲ್ಲ. ಅದರಿಂದ ಏಕಲವ್ಯನಿಗೆ ಅಪಾರ ದುಃಖವುಂಟಾಯಿತು; ಆದರೆ ಅವನು ಎದೆಗುಂದಲಿಲ್ಲ. ದ್ರೋಣಾಚಾರ್ಯರೇ ತನ್ನ ಗುರುವೆಂದು ಅವನು ಮನಸಾರೆ ಸ್ವೀಕರಿಸಿ, ಅವರ ಮಣ್ಣಿನ ಬೊಂಬೆಯೊಂದನ್ನು ತಯಾರಿಸಿದನು. ಅದರ ಮುಂದೆ ಭಕ್ತಿಯಿಂದ ನಮಸ್ಕರಿಸಿ, ತಾನೇ ಬಿಲ್ವಿದ್ಯೆಯನ್ನು ಕಲಿಯಲಾರಂಭಿಸಿದನು. ತನ್ನ ಗುರು ತನ್ನ ಮುಂದೆಯೇ ಇದ್ದಾರೆಂದು ಭಾವಿಸುತ್ತ, ಅದಕ್ಕೆ ಗುರುಸೇವೆ ಮಾಡುತ್ತ, ಅವರ ಮಾರ್ಗದರ್ಶನದಿಂದಲೇ ತಾನು ಕಲಿಯುತ್ತಿರುವೆನೆಂದು ಅವನು ಸದಾ ಶ್ರದ್ಧಾಭಕ್ತಿಯಿಂದ ನಡೆದುಕೊಳ್ಳುತ್ತಿದ್ದನು.



ಕೆಲವೇ ಸಮಯದಲ್ಲಿ ಏಕಲವ್ಯನು ಬಿಲ್ಲು ಬಿಡುವುದರಲ್ಲಿ ಪಾರಂಗತನಾದನು. ಅವನು ಸ್ವಪ್ರಯತ್ನದಿಂದ ಕಲಿತ ವಿದ್ಯೆ ಎಂತಹದು ಎಂಬುದು ಜಗತ್ತಿಗೆ ತಿಳಿದುಬರುವ ಸಂದರ್ಭ ತಾನಾಗಿ ಒದಗಿಬಂತು.

ಒಂದು ಸಲ ಕೌರವರೂ, ಪಾಂಡವರೂ ಬೇಟೆಗೆ ಹೊರಟಿದ್ದರು. ಕಾಡಿನಲ್ಲಿ ಮುಂದುವರಿಯುತ್ತಿದ್ದ ಹಾಗೆ, ಅವರ ಬೇಟೆಯ ನಾಯಿ ಏಕಲವ್ಯನನ್ನು ಕಂಡು ಬೊಗಳಿತು. ಅವನು ಆ ನಾಯಿಯ ಬಾಯಿಗೆ ಒಂದೇ ಬಾರಿ ಏಳು ಬಾಣಗಳನ್ನು ಗುರಿಯಿಟ್ಟು ಹೊಡೆದನು. ನಾಯಿ ಬಾಯಿತುಂಬ ಬಾಣಗಳನ್ನು ಚುಚ್ಚಿಸಿಕೊಂಡು ಪಾಂಡವರ ಬಳಿಗೆ ಬಂತು. ಅದನ್ನು ಕಂಡ ಪಾಂಡವರೆಲ್ಲ ಆಶ್ಚರ್ಯಚಕಿತರಾದರು. ''ಇಂತಹ

ಬಾಣಪ್ರಯೋಗ ಸಾಮಾನ್ಯರಿಗೆ ಸಾಧ್ಯವಿಲ್ಲ. ಅಪ್ರತಿಮ ಶಬ್ದ ವೇಧಿ ಬಾಣಪ್ರಯೋಗದಲ್ಲಿ ನುರಿತರಾದ ಶೂರರು ಮಾತ್ರವೇ ಹೀಗೆ ಮಾಡಬಲ್ಲರು. ಆದರೆ ಇಂತಹ ಅರಣ್ಯದಲ್ಲೂ ಈ ಬಗೆಯ ಶೂರರಿದ್ದಾರಲ್ಲ!'' ಎಂದು ಅವರೆಲ್ಲ ಮೂಗಿನ ಮೇಲೆ ಬೆರಳಿಟ್ಟುಕೊಂಡರು. ಆದರೆ ಅರ್ಜುನನಿಗೆ ಅದನ್ನು ನೋಡಿ ನಾಚಿಕೆಯುಂಟಾಯಿತು. ಈ ರೀತಿ ಬಾಣ ಹೊಡೆದವರು ಯಾರಿರಬಹುದು, ನೋಡಿಯೇ ಬಿಡೋಣ ಎಂದು ಅವರೆಲ್ಲ ಬಾಣ ಬಂದ ದಿಕ್ಕಿನಲ್ಲೇ ಹುಡುಕಿಕೊಂಡು ಹೋದರು. ಅಲ್ಲಿ ನೋಡಿದರೆ, ಒಬ್ಬ ವ್ಯಾಧರ ಯುವಕನೊಬ್ಬ ದ್ರೋಣರಂತೆಯೆ ಇರುವ ಮಣ್ಣಿನ ಪ್ರತಿಮೆಯ ಮುಂದೆ ಬಿಲ್ವಿದ್ಯೆ ಅಭ್ಯಾಸ ಮಾಡುತ್ತಿದ್ದುದು ಕಾಣಿಸಿತು. ಎಲ್ಲರೂ ಅವನನ್ನು ಕೇಳಿದರು, ''ಅಯ್ಯಾ , ಇಷ್ಟೊಂದು ಶ್ರದ್ಧೆಯಿಂದ ಬಿಲ್ವಿದ್ಯೆ ಕಲಿಯುತ್ತಿರುವ ನೀನು ಯಾರು? ನೀನು ಯಾರ ಮಗ?'' ಆಗ ಅವನು ಉತ್ತರಿಸಿದ: ''ವ್ಯಾಧರ ರಾಜನಾದ ಹಿರಣ್ಯಧನುಷನ ಮಗ ನಾನು. ನನ್ನ ಹೆಸರು ಏಕಲವ್ಯ ಎಂದು. ನಾನು ದ್ರೋಣಾ ಚಾರ್ಯರ ಶಿಷ್ಯ.''

ಪಾಂಡವರು ತಮ್ಮ ಗುರುಗಳ ಬಳಿಗೆ ಮರಳಿ ಬಂದ ಮೇಲೆ, ತಾವು ಕಂಡದ್ದನ್ನೆಲ್ಲ ವಿವರಿಸಿ ಹೇಳಿದರು. ಅರ್ಜುನನು ಗುರು ಗಳನ್ನು ಏಕಾಂತದಲ್ಲಿ ಭೇಟಿಯಾಗಿ ಹೇಳಿದ: ''ಗುರುಗಳೇ, ನೀವು ಹಿಂದೊಮ್ಮೆ ನನಗೆ ಹೇಳಿದ್ದಿರಿ, ಜಗತ್ತಿನಲ್ಲಿ ಬಿಲ್ವಿದ್ಯೆಯಲ್ಲಿ ನನ್ನನ್ನು ಮೀರಿಸುವವರು ಬೇರೆ ಯಾರೂ ಇಲ್ಲದಂತೆ ನೋಡಿ ಕೊಳ್ಳುತ್ತೀರಿ ಎಂದು. ಆದರೆ ನನಗೆ ಅರಿವಿಲ್ಲದೇ ನನ್ನನ್ನೂ ಮೀರಿಸುವ, ನಿಷಾದರಾಜನ ಮಗನಾದ ಏಕಲವ್ಯನೆಂಬ ಅಪ್ರ ತಿಮ ವೀರನನ್ನು ನೀವು ತಯಾರು ಮಾಡಿದ್ದೀರಲ್ಲ! 'ದ್ರೋಣಾ ಚಾರ್ಯರ ಶಿಷ್ಯ ನಾನು' ಎಂದು ಅವನೇ ಹೇಳಿದನಲ್ಲಾ?'' ಗೊಂದಲಕ್ಕೊಳಗಾದ ದ್ರೋಣಾಚಾರ್ಯರು ತಡಮಾಡದೆ ಅರ್ಜುನನನ್ನು ಕರೆದುಕೊಂಡು ಏಕಲವ್ಯನಿದ್ದ ಅರಣ್ಯ ಪ್ರದೇಶಕ್ಕೆ ಹೋದರು. ದ್ರೋಣಾಚಾರ್ಯರೇ ನಡೆದು ಬರುತ್ತಿದ್ದುದನ್ನು ಕಂಡ ಏಕಲವ್ಯನ ಆಶ್ಚರ್ಯಕ್ಕೆ ಪಾರವೇ ಇರಲಿಲ್ಲ. ಅವರ ಬಳಿಗೆ ಹೋಗಿ, ಅವರ ಕಾಲಿಗೆ ಬಿದ್ದು ನಮಸ್ಕಾರ ಮಾಡಿದ. ತಾನು ಮಾಡಿದ ಮಣ್ಣಿನ ಪ್ರತಿಮೆಯನ್ನು ಗುರುಗಳಿಗೆ ತೋರಿಸುತ್ತ, ''ನನ್ನ ಬಿಲ್ವಿದ್ಯೆಯೆಲ್ಲವೂ ನಿಮ್ಮ ಕೃಪೆಯಿಂದಲೇ ಬಂದುದು. ನೀವೇ ನನ್ನ ಗುರುಗಳು. ನಾನು ನಿಮ್ಮ ಶಿಷ್ಯ'' ಎಂದನು.

**ದ್ರೋಣರು** : ''ನೀನು ನನ್ನ ಶಿಷ್ಯನಾಗಿದ್ದರೆ ನನಗೆ ಗುರು ದಕ್ಷಿಣೆ ಕೊಡಬೇಕಲ್ಲವೆ?''

**ಏಕಲವ್ಯ** : ''ಗುರುಗಳೇ, ಈಗಲೇ ಕೊಡುತ್ತೇನೆ. ಏನು ಗುರುದಕ್ಷಿಣೆ ಕೊಡಬೇಕು ಎಂಬುದನ್ನು ಹೇಳಿ.''

**ದ್ರೋಣರು** : ''ಹಾಗಿದ್ದರೆ ನಿನ್ನ ಬಲಗೈ ಹೆಬ್ಬೆರಳನ್ನು ಕೊಡು!''

ಏಕಲವ್ಯನಿಗೆ ಅರ್ಥವಾಯಿತು. ತನ್ನ ಇಡೀ ಸಾಮ ರ್ಥ್ಯವೇ ಇದರಿಂದ ಇಲ್ಲದಾಗುವುದು. ತನ್ನ ಪ್ರಾಣದ ಪ್ರಾಣ ವಾದ ಬಿಲ್ವಿದ್ಯೆಯೆಲ್ಲವೂ ವ್ಯರ್ಥವಾಗುವುದು. ಆದರೆ ಅವನು ಗುರುವಿನ ಮಾತೇ ಅಂತಿಮ ಎಂದು ಭಾವಿಸಿ, ಒಂದಿಷ್ಟೂ ಅಳುಕದೆ ತನ್ನ ಹೆಬ್ಬೆರಳನ್ನು ಕತ್ತರಿಸಿ, ಗುರುಗಳ ಪಾದಗಳ ಮುಂದಿಟ್ಟನು. ದ್ರೋಣಾಚಾರ್ಯರಿಗೆ ಒಂದು ಕ್ಷಣ ದುಃಖ ವುಂಟಾಯಿತು. ಆದರೆ ಅವರು ಅರ್ಜುನನಿಗೆ ಕೊಟ್ಟ ಮಾತು ಉಳಿಸಿಕೊಳ್ಳಬೇಕಾಗಿತ್ತು. ಭಾರವಾದ ಮನಸ್ಸಿನೊಂದಿಗೆ ಅವರು ಅರ್ಜುನನೊಡನೆ ಹಿಂದಿರುಗಿದರು. ತನ್ನ ಶಿಷ್ಯನ ಹೆಬ್ಬೆರಳನ್ನು ಕೇಳುವ ಮೂಲಕ ಅವನ ಹತ್ಯೆ ಮಾಡಿದಂತಾಗಲಿಲ್ಲವೇ ಎಂಬ ಖೇದ ಅವರನ್ನು ಕ್ಷಣಕ್ಷಣಕ್ಕೂ ಸುಡುತ್ತಿತ್ತು.

ಅತ್ತ ಏಕಲವ್ಯನಿಗೆ ಮನದಲ್ಲೇನೋ ಸಂತೃಪ್ತಿ; ಆದರೆ ಮುಂದೇನು ಮಾಡಲಿ ಎಂಬ ಕಸಿವಿಸಿ. ಕೆಲವು ದಿನಗಳಲ್ಲೇ ಎಡಗೈಯಿಂದ ಬಾಣ ಬಿಡುವುದನ್ನು ಅಭ್ಯಾಸ ಮಾಡತೊಡ ಗಿದ. ಬಲಗೈಯ ಉಳಿದ ಬೆರಳುಗಳಿಂದೇ ಬಾಣ ಬಿಡಲೂ ಪ್ರಯತ್ನಿಸಿದ. ಆದರೆ ಮೊದಲಿನ ಪ್ರಾವೀಣ್ಯ ಯಾವ ರೀತಿ ಯಲ್ಲೂ ಬರುತ್ತಿರಲಿಲ್ಲ. ಕೊನೆಗೂ ಗುರುವಿನ ಕೃಪೆಗೆ ಒಳ ಗಾದೆನಲ್ಲಾ ಎಂಬ ಸಂತೃಪ್ತಿಯೊಂದೇ ಅವನಿಗೆ ಸಮಾಧಾನದ ವಿಷಯವಾಯಿತು.

ಗುರುಭಕ್ತಿಗೆ ಅತ್ಯುತ್ತಮ ಉದಾಹರಣೆಯಾಗಿ ನಿಲ್ಲುತ್ತಾನೆ ಏಕಲವ್ಯ. ಮೊದಲಿಗೆ ಗುರುಗಳು ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿ ಸದೆ ಹೋದಾಗಲೂ ಅವರ ಮೇಲೆ ಅವನಿಗಿದ್ದ ಶ್ರದ್ಧೆ ಮಾಯ ವಾಗಲಿಲ್ಲ. ಅವನು ಮಣ್ಣಿನ ಪ್ರತಿಮೆಯ ಮುಂದೆ ಬಿಲ್ವಿದ್ಯೆ ಯನ್ನು ಅಭ್ಯಾಸ ಮಾಡುವಾಗಲೆಲ್ಲ ಅವನಿಗಿದ್ದ ಗುರುಭಕ್ತಿ ಹೆಚ್ಚುತ್ತಲೇ ಹೋಯಿತು. ಗುರು ಎಂದರೆ ಪ್ರತ್ಯಕ್ಷ ಎದುರಿಗೆ ಇದ್ದುಕೊಂಡೇ ಕಲಿಸಬೇಕಿಲ್ಲ; ವಾಸ್ತವದಲ್ಲಿ ಸಚ್ಚಿದಾನಂದನೇ ನಿಜವಾದ ಗುರು. ಎಲ್ಲ ಜೀವಿಗಳ ಅಂತರ್ಯಾಮಿಯಾದ ಅವನು ಎಲ್ಲರ ಒಳಗೆ ಇದ್ದುಕೊಂಡೇ ಮಾರ್ಗದರ್ಶನ ಮಾಡು ತ್ತಾನೆ. ನಮ್ಮ ಸಾಧನೆಯನ್ನು ನಿಷ್ಠೆಯಿಂದ ಮಾಡುವ ಮೂಲಕ ನಾವು ಅಂತರಂಗದ ಗುರುವನ್ನು ವ್ಯಕ್ತಗೊಳಿಸಬೇಕು, ಅಷ್ಟೆ. ಆಗ ದ್ರೋಣಾಚಾರ್ಯರು ಪ್ರತ್ಯಕ್ಷವಾಗಿ ತನ್ನ ಶಿಷ್ಯನ ಗುಡಿ ಸಲಿಗೆ ಬಂದಂತೆ ಗುರು ನಮ್ಮ ಮುಂದೆ ಮೈದೋರುವನು. ಗುರುವಿನ ಇಚ್ಛೆಗೆ ಅನುಸಾರವಾಗಿ ನಡೆದುಕೊಂಡ ಏಕಲವ್ಯ ನಿಗೆ, ತನ್ನ ಇಡೀ ಬಾಳನ್ನೇ ಅವರ ಪದತಲದಲ್ಲಿ ಅರ್ಪಿಸಿದ ಧನ್ಯತಾಭಾವವೊಂದೇ ಕೊನೆಗೂ ಉಳಿದುಕೊಂಡಿತು.